ಮತ್ತೆ ಜೀವ ಬಂದಂಗಾಗಿತ್ತು. ಆದರೆ ಅದಾವುದನ್ನೂ ಆತ ತೋರಿಸದೆ ಸುಮ್ಮನೆ ಕೂತಲ್ಲೇ ಕೂತು ಸಂಭ್ರಮಪಡುತ್ತಿದ್ದ. ನಡುವೆ ನಿಂಗಣ್ಣ ಇದನ್ನೆಲ್ಲಾ ನೋಡಿ, 'ಈಗ ನಾವು ಏನು ಮಾಡಿ ಅಂತೀರಾ? ಅತ್ತಿಗೆ' ಎಂದು ಚಿನ್ನವ್ವನನ್ನು ಕೇಳಿದ. 'ಎಲ್ಲವನ್ನೂ ಮೂವರಿಗೂ ಮೂರು ಭಾಗ ಮಾಡಿಬಿಡಿ. ಹೊಲ, ಮನೆ, ದನ, ಕರು, ದವಸ, ಧಾನ್ಯ, ತಟ್ಟೆ, ಚೆಂಬು, ಮಡಿಕೆ, ಕುಡಿಕೆ... ಯಾವುದನ್ನೂ ಬಿಡಬೇಡಿ. ಸಮನಾಗಿ ಹಂಚಿ ಬಿಡಿ. ಮೊರಪುಟ್ಟಿನೂ ಬಿಡಬೇಡಿ. ನಾನು ಯಾರ ಹತ್ರನೂ ಸಾಲನಂತು ಮಾಡಿಲ್ಲ. ಯಾರಿಗೂ ಅನ್ಯಾಯವಾಗುವುದು ಬೇಡ. ಆದ್ರೆ ನನ್ನ ಹಿರಿಮಗ ಕೈಯ್ಲಾಗ್ದೋನು ಅವನ ಬಗ್ಗೆ ಸ್ವಲ್ಪ ನೀವು ಯೋಚಿಸಿ ತೀರ್ಮಾನ ತಗೊಳಿ' ಎಂದಳು ಚಿನ್ನವ್ವ. ಆದರೂ ಆಕೆಗೆ ತನ್ನ ಮನೆಯ ಹಳೆಯ ವಸ್ತುಗಳ ಜೊತೆ ತನಗಿದ್ದ ನೆನಪನ್ನು ಭಾವ ಸಂಬಂಧಗಳನ್ನು ಮರೆಯಲು ಆಗದೆ ಸಂಕಟಪಡುತ್ತಿದ್ದಳು. ಹಳೆಮನೆಯ ಜೊತೆ ಮತ್ತು ಆ ಮನೆಯಲ್ಲಿದ್ದ ಪ್ರತಿಯೊಂದು ವಸ್ತುವಿನ ಜೊತೆಯೂ ತನ್ನವ್ವನಿಗೆ ಇದ್ದ ಅರಿವಿನ ಅನನ್ಯತೆಯ ಭಾವನೆಯನ್ನು ಅರಿತ ಮಕ್ಕಳು ತಮಗೆ ಈ ಮನೆಯಿಂದ ಒಂದು ಹುಲ್ಲು ಕಡ್ಡಿಯೂ ಬೇಡ ಎಂದು ಹೇಳಿ ಭೂಮಿ ಪಾಲನ್ನು ಬಿಟ್ಟು ಮತ್ತೆ ಬೇರೆ ಯಾವ ವಸ್ತುವನ್ನೂ ಪಾಲು ಮಾಡಲು ಬಿಡಲಿಲ್ಲ.

ಚಿನ್ನವ್ವನ ಇಬ್ಬರು ಮೈದುನರೂ ಚರ್ಚೆ ಮಾಡಿ ಎಲ್ಲವನ್ನೂ ಮೂರು ಭಾಗ ಮಾಡಿ ಹಂಚಿದರು. ಊರುಮಗ್ಗುಲಿನ ಹೊಲ ತನಗೇ ಬೇಕೆಂದು ರಾಜಣ್ಣ ಮೊದಲೇ ಹಟ ಹಿಡಿದು ಕೂತನು. ಅವನ ತಲೆಯಲ್ಲಿ ನಾಳೆದಿನ ಆ ಹೊಲ ತನ್ನ ಪಾಲಿಗೆ ಬಂದರೆ ಅದನ್ನು ಸೈಟುಗಳಾಗಿ ಪರಿವರ್ತಿಸಿ ಮಾರಿ ಹೆಚ್ಚು ಹಣ ಮಾಡಬಹುದು ಎಂಬುದು ಅವನ ಆಲೋಚನೆಯಾಗಿತ್ತು. ಆದರೆ ಚಂದ್ರಪ್ಪ ತನ್ನ ದೈಹಿಕ ಅಸಹಾಯಕತೆಯನ್ನು ತೋಡಿಕೊಂಡು ಆ ಹೊಲವನ್ನು ತನ್ನ ಪಾಲಿಗೇ ಕೊಡಬೇಕೆಂದು ಕೇಳಿದ. ಅವನು ಆ ಹೊಲವನ್ನು ಮುಂದೆ ಒಳ್ಳೆ ತೆಂಗು ಬಾಳೆ ಅಡಿಕೆಯ ತೋಟವನ್ನಾಗಿ ಅಭಿವೃದ್ಧಿಪಡಿಸುವ ಆಲೋಚನೆಯಲ್ಲಿದ್ದ. ಹಾಗಾಗಿ ಆತ ಅದನ್ನು ತನಗೇ ಕೊಡಿ ಎಂದು ಕಣ್ಣೀರು ಹಾಕತೊಡಗಿದ. ಅದನ್ನು ನೋಡಿದ ಗೌರಿ ಹಾಗೂ ಅವನ ಮಕ್ಕಳೂ ಅಳುವುದಕ್ಕೆ ಶುರು ಮಾಡಿದವು. ಆಗ ಚಿನ್ನವ್ವನೇ ಆ ಮಕ್ಕಳ, ಗೌರಿಯ, ಚಂದ್ರಪ್ಪನ ಗೋಳು ನೋಡುತ್ತಾ ಮಧ್ಯೆ ಪ್ರವೇಶಿಸಿ, 'ಊರು ಮಗ್ಗುಲ ಹೊಲವನ್ನು ಚಂದ್ರಪ್ಪನ ಭಾಗಕ್ಕೇ ಕೊಡಿ. ಅವನು ಕೈಯ್ಲಾಗ್ದೋನು, ಗೇಯಲಾರ, ಮಕ್ಕಳೊಂದಿಗ...' ಎಂದು ಅಬ್ಬರಿಸಿದಳು. ಅವಳ ಅಬ್ಬರಕ್ಕೆ ರಾಜಣ್ಣ ಥಂಡ ಹೊಡೆದು, 'ಹಾಗೇ ಮಾಡಿ ಆಯ್ತು, ಅವ್ವ ಹೇಳೋ ಹಾಗೆಯೇ ಅದನ್ನು ಚಂದ್ರಣ್ಣನ ಭಾಗಕ್ಕೇ ಕೊಟ್ಟುಬಿಡಿ' ಎಂದು ಹೇಳಿ ತಣ್ಣಗೆ ಕೂತ. ಆಗ ಆ ಊರುಮಗ್ಗುಲ ಹೊಲವನ್ನು ಚಂದ್ರಪ್ಪನ ಭಾಗಕ್ಕೆ ಎಂದು ನಿಂಗಣ್ಣ ಹೇಳಿದ. ಕ್ಷಣ ಬಿಟ್ಟು ರಾಜಣ್ಣ, 'ನನಗೆ ಮನೆ ಬೇಡ, ನಾನು ಈ ಮನೆಯಲ್ಲಿ ಇರೋದಿಲ್ಲ. ಮನೆಯನ್ನೂ ಅವರಿಗೇ ಕೊಟ್ಟು ಬಿಡಿ. ಆದರೆ ಮನೆಗೆ ಬದಲಾಗಿ ಮೇಲೆ ಹೈವೇ ರಸ್ತೆ ಹತ್ತಿರವಿರುವ ಎರಡು ಎಕರೆ ಹೊಲವನ್ನು ನನ್ನ ಪಾಲಿಗೆ ಹೆಚ್ಚುವರಿಯಾಗಿ ಕೊಟ್ಟು ಬಿಡಿ' ಅಂದ. ನಾಳೆ ದಿನ ಅದಕ್ಕೆ ತುಂಬಾ ಬೆಲೆ ಬರುತ್ತದೆ ಎಂಬ ಆಲೋಚನೆ ಅವನ ತಲೆಯಲ್ಲಿತ್ತು.

ದೂರದ ಹೊಲ ಚಂದ್ರಪ್ಪ ಮತ್ತು ಸಿದ್ದಯ್ಯ ಇಬ್ಬರಿಗೂ ಬೇಕಾಗಿರಲಿಲ್ಲ. ಅಷ್ಟು ದೂರ ಹೋಗಿ ಯಾರು ವ್ಯವಸಾಯ ಮಾಡ್ತಾರೆ ಎಂಬ ಉದಾಸೀನ ಅವರಲ್ಲಿತ್ತು. ಆದ್ದರಿಂದ ಅವರಿಬ್ಬರೂ ಆ ಜಮೀನಿನಲ್ಲಿ ಪಾಲು ಕೇಳಲು ಒತ್ತಾಯಿಸಲಿಲ್ಲ. ರಾಜಣ್ಣನಿಗೆ ಹೆದ್ದಾರಿಯ ಹತ್ತಿರದ ಎರಡು ಎಕರೆ ಆ ಹೊಲ ಮತ್ತು ಕೆರೆಯ ಹಿಂದೆ ಒಂದು ಎಕರೆ ಗದ್ದೆಯನ್ನೂ ಬಿಡಲಾಯಿತು. ಸಿದ್ದಯ್ಯನಿಗೆ ಕೆರೆ ಹಿಂದೆ ಎರಡು ಎಕರೆ ಗದ್ದೆ, ಮತ್ತೆ ಊರಿನ ಹತ್ತಿರ ಇನ್ನೊಂದು ಕಡೆ ಇದ್ದ ಒಂದು ಎಕರೆ ಹೊಲವನ್ನು ವಿಂಗಡಿಸಲಾಯಿತು. ಚಂದ್ರಪ್ಪನಿಗೆ ಕೆರೆ ಹಿಂದೆ ಒಂದು ಎಕರೆ ಗದ್ದೆ ಮತ್ತು ಊರು ಮಗ್ಗುಲಿನ ಎರಡೆಕರೆ ಹೊಲವನ್ನು ಅಂತ ಹಂಚಲಾಯಿತು. ಇನ್ನುಳಿದ ಅರ್ಧ ಎಕರೆ ಗದ್ದೆಯನ್ನು ಚಿನ್ನವ್ವನ ಜೀವನಾಂಶಕ್ಕೆ ಅಂತ ಬಿಡಲಾಯಿತು.

ಹೀಗೆ ಆಸ್ತಿಯೆಲ್ಲಾ ಪಾಲಾದ ಮೇಲೆ ಚಿನ್ನವ್ವ ತನ್ನ ಹಿರಿಯ ಮಗ ಚಂದ್ರಪ್ಪನ ಜೊತೆಯಲ್ಲೇ ಇರುವುದಾಗಿ ಹೇಳಿದಳು. ಅತಂತ್ರದಲ್ಲಿರುವ ಚಂದ್ರಪ್ಪನ ಸಂಸಾರವನ್ನು ಸರಿದಾರಿಗೆ ತರಬೇಕೆಂದು, ತನ್ನ ಸೊಸೆಗೆ ಜವಾಬ್ದಾರಿ ವಹಿಸಿ, ಚೆನ್ನಾಗಿ ಓದುತ್ತಿರುವ ತನ್ನ ಮೊಮ್ಮಕ್ಕಳಿಬ್ಬರಿಗೂ ಒಳ್ಳೆ ವಿದ್ಯೆ ಕೊಡಿಸಬೇಕೆಂದು ಚಿನ್ನವ್ವ ವಾರದಿಂದ ಯೋಚಿಸಿ ತೀರ್ಮಾನಕ್ಕೆ